# ನನ್ನ ದೇವರು

ನನ್ನ ದೇವರು
ನನ್ನ ತಡಿಯಲ್ಲಿರಲಿ...
ನನ್ನ ದೇವರು
ನನ್ನ ಗುಡಿಯಲ್ಲಿರಲಿ...

ನನ್ನ ದೇವರು
ನನ್ನ ನುಡಿಯಲ್ಲಿರಲಿ...
ನನ್ನ ದೇವರು
ನನ್ನ ನಡೆಯಲ್ಲಿರಲಿ...

ನನ್ನ ದೇವರು
ನನ್ನ ಮನೆಯಲ್ಲಿರಲಿ
ನನ್ನ ದೇವರು
ನನ್ನ ಮನದಲ್ಲಿರಲಿ...

ಪಿಸು ನುಡಿದರೆ ಓಗೊಡನೆ ರಾಮು?
ಕೆಪ್ಪನೆ ಕಿವಿಗೊಡನೆ ರಹೀಮು?

ಮೈದುಂಬಿ ಕುಣಿಯುವೆನು
ಮನಸಾರೆ ಭಜಿಸುವೆನು
ನನ್ನ ಮನೆಯೊಳಗೆ
ನೆಮ್ಮದಿಯಲಿ ವಿರಮಿಸಲಿ
ಹಾದಿ ಬೀದಿಯ ಜನತೆ.

● ಸವಿತಾ ನಾಗಭೂಷಣ



ಚಿತ್ರಗಳು: ವಾಗೀಶ ಹೆಗಡೆ